# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 703–2017** **ಸಿ. ಡಬ್ಲುಃ 04**

**ಪಿ. ಡಬ್ಲುಃ 04**

| | |
|---|---|
| ಸಾಕ್ಷಿದಾರರ ಹೆಸರು | ಸಿದ್ಧರಾಜು |
| ತಂದೆಯ  ಹೆಸರು | ಪುಟ್ಟಬಸವನಾಯ್ಕ |
| ವಯಸ್ಸು | 45 ವರ್ಷ |
| ಕೆಲಸ | ವ್ಯಾಪಾರ |
| ವಾಸ | ಕಳಲೆ ಗ್ರಾಮ, ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 04–01–2023 |

## ಮುಖ್ಯ ವಿಚಾರಣೆಃ  ಶ್ರೀ.ಎಪಿಪಿ   ವಕೀಲರಿಂದಃ

ಚಾಸಾ–1 ರಿಂದ 4 ನನಗೆ ಗೊತ್ತಿಲ್ಲ. ಚಾಸಾ–6 ನಮ್ಮ ಗ್ರಾಮದವರು.  ನ್ಯಾಯಲಯದ ಮುಂದೆ ಇರುವ ಆರೋಪಿಗಳು ನನಗೆ ಗೊತ್ತಿಲ್ಲ.  ಸಾಕ್ಷಿಗೆ ಒಂದು ದಾಖಲೆ ತೋರಿಸಿದ್ದು ಅದು ಸ್ಥಳ ಮಹಜರ್ ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–1 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ–1(ಡಿ) ಎಂದು ಗುರುತಿಸಲಾಯಿತು. ನಿಪಿ–1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ–1 ಕ್ಕೆ ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವಾಹನ ಮತ್ತು ಹಣವನ್ನು ಅಮಾನತ್ತು ಪಡಿಸಿಕೊಂಡಿಲ್ಲ.  ನಿಪಿ–1 ಕ್ಕೆ ನನ್ನನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿಲ್ಲ. ಈ ಪ್ರಕರಣದ ವಿಧ್ಯಮಾನ ಗೊತ್ತಿಲ್ಲ.

(ಸಸಅ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

## ಪಾಟೀ ಸವಾಲುಃ ಶ್ರೀ. ಎಪಿಪಿ ಯವರಿಂದ

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸಮಾಡಿರುತ್ತೇನೆ. ಸಾಮಾನ್ಯವಾಗಿ ಯಾವುದಾದರೂ ದಾಖಲೆಗೆ ಸಹಿ ಮಾಡಬೇಕಾದರೆ

ಅದರಲ್ಲಿ ಏನು ಬರೆದಿದೆ ಎಂದು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ನಿಪಿ-1 ಕ್ಕೂ ಸಹ ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಪೊಲೀಸರು ಬಂದು ಕೇಳಿದ್ದರಿಂದ ತಾನು ಸಹಿ ಮಾಡಿರುವುದಾಗಿ ನುಡಿಯುತ್ತಾರೆ.

ದಿಃ03-04-2017 ರಂದು ನನ್ನನ್ನು ಮತ್ತು ಚಾಸಾ-6 ರವರನ್ನು ಬರಮಾಡಿಕೊಂಡು ಕೇಸಿನ ವಿದ್ಯಮಾನ ತಿಳಿಸಿ ಪಂಚರಾಗಬೇಕು ಎಂದು ಕೋರಿಕೊಂಡರು ಎಂದರೆ ಸರಿಯಲ್ಲ. ನಾವು ಒಪ್ಪಿದ ಮೇರೆಗೆ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವಾಗ ಚಾಸಾ-1 ರಿಂದ 4 ರವರು ವಾಹನ ತಪಾಸಣೆ ಮಾಡತ್ತಿದ್ದರು ಎಂದರೆ ಸರಿಯಲ್ಲ. ಹುಲ್ಲಹಳ್ಳಿ ವೃತ್ತದ ಕಡೆಯಿಂದ ಗುಂಡ್ಲುಪೇಗೆ ಕಡೆಗೆ ಬರುತ್ತಿದ್ದ ವಾಹನಗಳನ್ನು ಅನುಮಾನಗೊಂಡು ಪರಿಶೀಲನೆ ಮಾಡಿದಾಗ ಅದರಲ್ಲಿ ಆರೋಪಿಗಳು ಹಣ ಸಾಗಾಣಿಕೆ ಮಾಡುತ್ತಿದ್ದು ವಾಹನದಲ್ಲಿ ಇದ್ದ ಮಹೇಶ, ಮಲ್ಲಿಕಾರ್ಜುನ ರವರುಗಳು ವಾಹನದಲ್ಲಿ ಇದ್ದ ಹಣದ ಬಗ್ಗೆ ವಿಚಾರಣೆ ಮಾಡಿಲಾಗಿ ಹಣ ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಯಾವುದೇ ಪೂರಕ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾಹನ ನಂಬರ್ ನೋಡಲಾಗಿ ಕೆಎ-45-ಎಎ-4565 ಆಗಿದ್ದು. ಅದರ ಒಳಗಡೆ ಒಂದು ಕಬ್ಬಿಣದ ಕಪ್ಪು ಬಣ್ಣದ ಬಾಕ್ಸ್ ಇದ್ದು ಅದನ್ನು ತೆಗೆದುನೋಡಿದಾಗ ಅದರಲ್ಲಿ ರೂ.500/- ಮೌಲ್ಯದ 4 ಕಟ್ಟುಗಳ ಇದ್ದು ಒಟ್ಟು 20 ಲಕ್ಷ ಹಣ ಇರುವುದು ಕಂಡುಬಂದಿತು ಎಂದರೆ ಸರಿಯಲ್ಲ. ಆ ಹಣ ಸಂಬಂಧ ಆರೋಪಿತರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿದ ಕಾರಣ ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡು ನಿಪಿ-1 ರಂತೆ ಮಹಜರ್ ಕ್ರಮ ಜರುಗಿಸಿದರು ಎಂದರೆ ಸರಿಯಲ್ಲ ಆರೋಪಿತರು ಅಕ್ರಮವಾಗಿ ಯಾವುದೇ ದಾಖಲೆಗಳು ಇಲ್ಲದೇ ಚುನಾವಣೆ ನೀತಿ ಸಂಹಿತೆಯನ್ನು ಉಲ್ಲಂಘನೆ ಮಾಡಿ ಹಣ ಸಾಗಾಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ಸಮಕ್ಷಮ ನಿಪಿ-2,3 ಮತ್ತು 6 ರ ಭಾವ ಚಿತ್ರದಲ್ಲಿರುವ ವಾಹನ ಮತ್ತು ಕಬ್ಬಿಣದ ಬಾಕ್ಸ್ ಮತ್ತು ಹಣವನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ವಿದ್ಯಮಾನ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**